ಮುಂಬಾಗಿಲು ತೆರೆದೇ ಕುಳಿತಿದ್ದ. ಅವನಿಗೆ ಇಹದ ಯಾವುದೇ ಮೋಹ, ಬಂಧ ಕಟ್ಟಿ ಹಾಕಿರಲಿಲ್ಲ. ಅದು ಉಂಟು ಮಾಡುವ ನೋವು ಎಷ್ಟು ದೊಡ್ಡದೆಂದು ಅವನಿಗೆ ಅರಿವಿದ್ದ ಕಾರಣ, ರತ್ನಳ ಬಗ್ಗೆ ಅವನಿಗೆ ಸಂತಾಪವಿತ್ತು. ಅಂಥ ಸ್ನೇಹಮಯಿ ಮತ್ತು ಮಮತಾಮಯಿ ಹೃದಯಕ್ಕಾದ ಘಾಸಿ ನೆನೆದೇ ಕಾಯ ಮರುಗಿದ್ದ. ಅಲ್ಲದೇ ವೀರಭದ್ರ ಅಜ್ಜರಕಾಡಿಗೆ ಹೋಗಿ, ಬಂದು ಇವರೆಲ್ಲರ ಮನಸಲ್ಲಿ ಸ್ನೇಹದ ಸುಧೆ ಹರಿಸಿದ್ದ. ಈಗ ಆ ವ್ಯಕ್ತಿಯೇ ಇಲ್ಲವೆಂದರೆ.! ಬದುಕು ಎಷ್ಟು ಅನಿಶ್ಚಿತ, ಅನೂಹ್ಯ..!

ಅಜ್ಜರಕಾಡಿನ ನಿವಾಸಿಗಳು ಬೆಳಿಗ್ಗೆ ಯಾರೂ ತಮ್ಮ ಮನೆಯ ಜಾಗ ಬಿಟ್ಟು ಆಚೆ ಕದಲಲಿಲ್ಲ. ಸ್ವಲ್ಪ ಬಿಸಿಲು ಏರುತ್ತಲೇ, ಕಾರಗದ್ದೆಯಿಂದ ಅರಣ್ಯ ಇಲಾಖೆಯ ಹತ್ತು ಸಿಬ್ಬಂದಿ, ಅಲ್ಲಿಗೆ ತಯಾರಿಯೊಂದಿಗೆ ಆಗಮಿಸಿದರು. ಅವರು ಹೊತ್ತು ತಂದ ಸರಂಜಾಮುಗಳಲ್ಲಿ ದೊಡ್ಡ ಬಲೆ ಇತ್ತು. ಹಿಂದಿನ ದಿನ ಚಿರತೆ ಕಾಣಿಸಿಕೊಂಡ ಜಾಗದಲ್ಲಿ, ಹಸಿರು ಹುಲ್ಲುಹಾಸಿನ ಮೇಲೆ ಬಲೆಯನ್ನು ಉದ್ದಕ್ಕೆ ಸುಳಿವು ಸಿಗದಂತೆ ಹಾಸಿ, ಆ ಬಲೆಯ ತುದಿಯನ್ನು ಹಗ್ಗದಿಂದ ಮರಕ್ಕೆ ಕಟ್ಟಿದರು. ಯಾವುದೇ ವಸ್ತು ಆ ಬಲೆಗೆ ಸಿಲುಕಿದಾಗ, ಆ ಬಲೆ ತಾನಾಗಿಯೇ ಮೇಲೇರುವಂತೆ, ವ್ಯವಸ್ಥೆ ಮಾಡಲಾಯಿತು. ಎಲ್ಲರೂ ಉಸಿರು ಬಿಗಿ ಹಿಡಿದು ಕಾದೇ ಕಾದರು. ಹೊತ್ತು ಸರಿಯುತ್ತಿತ್ತು. ನರಭಕ್ಷಕನ ಸುಳಿವೇ ಇರಲಿಲ್ಲ.

ಹಿಂದಿನ ದಿನ ಅಲ್ಲಿ ಬೇಟೆ ಆಡಿದ ಪ್ರಾಣಿ, ಮರುದಿನವೂ ಅದೇ ಜಾಗದಲ್ಲಿ ಹೊಂಚು ಹಾಕಿ ಕಾಯಬಹುದೆಂಬ ಸಣ್ಣ ಅಂದಾಜಿನ ಮೇಲೆ ಅವರೆಲ್ಲಾ ಅದೇ ಸ್ಥಳದಲ್ಲಿ ಕಾಯುತ್ತಿದ್ದರು. ಎದುರಿಗೆ ಯಾರೂ ಕಾಣದೇ ಹೋದರೂ, ಮರೆಯಲ್ಲಿ ನಿಂತು ಅವರೆಲ್ಲಾ ಸನ್ನದ್ಧರಾಗಿ ನಿಂತಿದ್ದರು. ಪ್ರಾಣ ರಕ್ಷಣೆಗೆಂದು ಅವರ ಕೈಯಲ್ಲಿ ಆಯುಧಗಳೂ ಇದ್ದವು. ಅವರು ಅಲ್ಲಿ ಸೇರಿ ಮರೆಯಲ್ಲಿ ಹೊಂಚು ಹಾಕಿ ಕಾಯುತ್ತಿದ್ದರೆ, ಇತ್ತ ಮನೆಯವರೆಲ್ಲಾ ಅಲ್ಲಿ ಏನು ನಡೆಯುತ್ತಿದೆ ಎಂಬ ಕಾತುರವೂ, ಭಯವೂ ಹೊತ್ತುಕೊಂಡು ಚಡಪಡಿಸುತ್ತಿದ್ದರು. ನೀರು ತರಲೆಂದು ಕೊಡಪಾನ ಹಿಡಿದು ನದಿಯ ಕಡೆಗೆ ಹೋದ ಜಂಪಣ್ಣ ಅಷ್ಟೇ ವೇಗವಾಗಿ ಓಡಿ ಬಂದಿದ್ದ.

'ಎಲ್ರೂ ಒಳಗೆ ಹೋಗಿ.. ಚಿರತೆ ಇಲ್ಲೇ ನದೀಲಿ ನೀರು ಕುಡೀತಿದೆ.. ಯಾರೂ ಹೊರಗೆ ಬರಬೇಡಿ..' ಎಂದು ಕದವಿಕ್ಕಿಕೊಂಡ.

'ಬಾರೋ.. ಕಾಯ .. ಒಳಗೆ.. ನಿನ್ನ ನೋಡಿ ಇಲ್ಲಿ ಬಂದರೆ ಕಷ್ಟ.. ಅದಕ್ಕೆ ಮನುಷ್ಯನ ವಾಸನೆ, ರುಚಿ ಎರಡೂ ಸಿಕ್ಕಿದೆ..' ಕಾಯನ ಉತ್ತರಕ್ಕೆ ಕಾಯದೇ ಜಂಪಯ್ಯ ನಡುಗುತ್ತ ಅವನನ್ನು ಒಳಗೆಳೆದುಕೊಂಡು ಕದವಿಕ್ಕಿಕೊಂಡ. ಎಲ್ಲರೂ ಉಸಿರು ಬಿಗಿ ಹಿಡಿದು ಪ್ರಾಣ ಭಯದಿಂದ ಒಳಗೇ ಅಡಗಿ ಕುಳಿತರು. ಅದರ ಘರ್ಜನೆ ಹತ್ತಿರದಲ್ಲೇ ಆಲಿಸಿದಂತಾಗಿ, ಗಂಟಲಪಸೆ ಆರಿ ಹೋದಂತಾಗಿತ್ತು. ಮನೆಯ ಕಿಟಕಿಯನು ಸಣ್ಣದಾಗಿ ತೆರೆದು ನೋಡಿದ ಜಂಪಣ್ಣನ ಉಸಿರಾಟವೇ ನಿಂತು ಹೋದಂತಾಗಿತ್ತು. ಚಿರತೆ ಯಾವ ಭಯಭೀತಿ ಇಲ್ಲದೇ ಗಂಭೀರವಾಗಿ ಇವರ ಮನೆಯ ಪ್ರದೇಶವನ್ನು ದಾಟಿ ರಸ್ತೆಗಿಳಿದು, ಸೇತುವೆಯ ದಿಕ್ಕಿನತ್ತ ಹೋಗುತ್ತಲಿತ್ತು, ಬಹುಶಃ ಅದು ಬಾಯಾರಿಕೆಗೆ ನೀರು ಕುಡಿಯಲು ಇಲ್ಲಿ ನದಿಯ ಬಳಿ ಬಂದಿರಬಹುದೆಂದು ಊಹಿಸಿದರು. ಅದರ ಆಕ್ರತಿ, ಕಣ್ಣಿಂದ ಮರೆಯಾದೊಡನೇ ಜಂಪಯ್ಯ ಹೊರ ಬಂದ. ಶಿವಯ್ಯನನ್ನು ಕರೆದು ವಿಷಯ ತಿಳಿಸಿದ. ಅಷ್ಟು ಹೊತ್ತು ಸುಮ್ಮನಿದ್ದ ಪಾಂಡುರಂಗ ಭಯದಿಂದ ಅಳಲು ಮೊದಲು ಮಾಡಿದ. ಅವನನ್ನು ರಮಿಸುವುದು ಕಷ್ಟವಾಯಿತು.

'ಶಿವಯ್ಯ.. ಆ ಚಿರತೆ ಇಲ್ಲೇ ಅಡ್ಡಾಡ್ತಿದೆ.. ಮಗು ಅಳು ಕೇಳಿ ಇತ್ತ ಬಂದರೂ ಬರಬಹುದು.. ಹೇಗಾದರೂ ಸಂಭಾಳಿಸು..' ಜಂಪಯ್ಯ ದೀನವಾಗಿ ಭಿನ್ನವಿಸಿಕೊಂಡ. ಕಮಲಿ ಎಷ್ಟೇ ಪ್ರಯತ್ನಿಸಿದರೂ ಪಾಂಡು ಅಳು ನಿಲ್ಲಿಸಲಿಲ್ಲ. ಅವನ ಅಳು ಆಲಿಸಿ ಕಾಯ ತಾನಾಗಿಯೇ ಬಂದು ಮಗುವನ್ನು ಪಡೆದು ಬೆನ್ನಿಗೆ ಹಾಕಿಕೊಂಡ. ಪಾಂಡು ಕ್ರಮೇಣ ಅಳು ನಿಲ್ಲಿಸಿತು.

ಆ ದಿನವಿಡೀ ಕಾದರೂ ಚಿರತೆ ಅವರು ಬೀಸಿದ ಬಲೆಯ ಕಡೆಗೆ ಸುಳಿಯಲಿಲ್ಲ. ಹೊತ್ತು ಹೋಗುತ್ತಿತ್ತು. ಎಲ್ಲರೂ ಹಸಿವು, ಬಾಯಾರಿಕೆಯಿಂದ ಕಂಗೆಟ್ಟರು. ಜೊತೆಗೆ ನಿರಾಸೆಯೂ ಆವರಿಸಿತ್ತು. ಯಾವ ಕ್ಷಣದಲ್ಲಾದರೂ, ಯಾವ ಕಡೆಯಿಂದಲಾದರೂ ಅದು ಬರಬಹುದೆಂಬ ಎಚ್ಚರಿಕೆಯೂ ಕಾಪಿಡಬೇಕಿತ್ತು.

ಅಷ್ಟರಲ್ಲಾಗಲೇ ಒಂದು ಸಣ್ಣ ಘರ್ಜನೆ ಆಲಿಸಿತು. ಎಲ್ಲರೂ ಕಿವಿ ನಿಮಿರಿಸಿಕೊಂಡು ಕಾರ್ಯತತ್ಪರರಾದರು. ಉಸಿರು ಬಿಗಿ ಹಿಡಿದು, ನರಭಕ್ಷಕನನ್ನು ಮಣಿಸಲು ಸನ್ನದ್ಧರಾದರು. ಅವರ ಊಹೆಯಂತೆ, ಅದು ಹಿಂದಿನ ದಿನ ವೀರಭದ್ರನನ್ನು ಹತ್ಯೆಗೈದ ಹೊತ್ತಿಗೆ ಸರಿಯಾಗಿ, ಅದೇ ಸ್ಥಳದಲ್ಲಿ ಹೊಂಚು ಹಾಕಲು ರಾಜಗಾಂಭೀರ್ಯದಲ್ಲಿ ಬರುತ್ತಿತ್ತು. ಅವರಲ್ಲೇ ಎಲ್ಲರೂ ಮರದ ಮೇಲೆ, ಮರೆಯಲ್ಲಿ ನಿಂತು ಅದು ತಾನಾಗಿಯೇ ಬಂದು ಬಲೆಯಲ್ಲಿ ಸಿಲುಕುವ ಸಂದರ್ಭವನ್ನು ನಿರೀಕ್ಷಿಸುತ್ತಿದ್ದರು. ಅದೇ ಹೊತ್ತಿಗೆ ಯೋಗೀಶರು ಸೇತುವೆಯ ಬದಿಯ ಮೆಟ್ಟಿಲುಗಳಿಂದ ಕೆಳಗಿಳಿದು, ಇತ್ತ ಕಡೆಯೇ ಬರತೊಡಗಿದರು. ಅವರಿಗೆ ಇಲ್ಲಿ ನಡೆಯುತ್ತಿದ್ದ ಯಾವ ವಿದ್ಯಮಾನದ ಕಲ್ಪನೆಯೇ ಇರದ ಯೋಗೀಶರು, ಪತ್ರಿಕೆಯಲ್ಲಿ ಪ್ರಕಟವಾದ ವರದಿ ಓದಿ, ಅರಣ್ಯ ಇಲಾಖೆಯನ್ನು ಸಂಪರ್ಕಿಸಿ ನೆರವು ನೀಡಲೆಂದು ಧಾವಿಸಿ ಬಂದಿದ್ದರು.

ಯೋಗೀಶರು ಇಳಿದು ಮಣ್ಣಿನ ರಸ್ತೆಯ ಹಾದಿಯಲ್ಲೇ ಬಿರುಸಾಗಿ ಹೆಜ್ಜೆ ಹಾಕುತ್ತಿದ್ದರೆ, ಚಿರತೆ ಅವರನ್ನು ಕಾಣುತ್ತಲೇ ಅಣತಿ ದೂರದಲ್ಲಿ ಹೊಂಚು ಹಾಕಿ ಕಾಯುತ್ತಿತ್ತು. ಯೋಗೀಶರಿಗೆ ಅಲ್ಲೇ ನಿಲ್ಲಿಸುವಂತೆಯೂ ಇರಲಿಲ್ಲ. ಅವರಿಗ ಸಂದೇಶ ಕಳಿಸಬೇಕೆಂದರೂ ತೋಚದೇ, ಕಿರುಚಾಡಲೂ ಆಗದೇ ಉಸಿರು ಬಿಗಿ ಹಿಡಿದು ಮುಂದೇನು ಮಾಡಬೇಕೆಂದು ತೋಚದೇ ಅಲ್ಲಿನ ಅಧಿಕಾರಿ ತಮ್ಮ ಆಯುಧವನ್ನು ಹೊರಗೆ ತೆಗೆಯುವ ವೇಳೆಯಲ್ಲಿ ಚಿರತೆ ಮರೆಯಲ್ಲಿ ನಿಲ್ಲಲು ತಾನಾಗಿಯೇ ಇವರು ಹಾಸಿದ್ದ ಬಲೆಯ ಒಳಗೆ ಕಾಲಿರಿಸಿತು. ಅದಕ್ಕೆ ಏನಾಗುತ್ತಿದೆ ಎಂದು ಅರಿವಾಗುವ ಹೊತ್ತಿಗೆ ಬಲೆಯ ತುದಿಗೆ ಕಟ್ಟಿದ್ದ ಭಾರ ಕೆಳಗೆ ಜಗ್ಗಿದಂತಾಗಿ ಚಿರತೆಯನ್ನು ಹೊತ್ತ ಬಲೆ ಮೇಲೇರಿತು. ಚಿರತೆ ತಾನು ಬಲೆಯೊಳಗೆ ಮೈಕೈ ಅಲುಗಾಡಿಸಲಾಗದೇ ಘರ್ಜಿಸುತ್ತಾ, ಚಡಪಡಿಸುತ್ತ, ಹೊರಬರಲು ತಳಮಳಿಸಿದರೆ, ಯೋಗೀಶರಿಗೆ ಆಗಲೇ ಸಂಗತಿ ಅರಿವಾಗಿ ಸ್ವಲ್ಪದರಲ್ಲೇ ತಪ್ಪಿ ಹೋದ ಅಪಾಯವನ್ನು ನೆನೆದು ನಡುಗಿ ಹೋದರು.

ಚಿರತೆ ವಿಲವಿಲನೇ ಬಲೆಯಲ್ಲಿ ಸಿಲುಕಿ ಒದ್ದಾಡುತ್ತಿತ್ತು. ಆಗಲೇ ಅಧಿಕಾರಿಗಳು ಸೇತುವೆಯ ಮೇಲೆ ಹೋಗಿ ಬಂದ ವಾಹನದಲ್ಲಿ ಹೋಗಿ ಅರವಳಿಕೆ ತಜ್ಞರನ್ನು ಕರೆಸುವ ವ್ಯವಸ್ಥೆಗೆ ಹೊರಟು ಬಿಟ್ಟರು. ಇನ್ನಾರೋ ಹೋಗಿ ಅಲ್ಲಿ ಉಸಿರು ಬಿಗಿ ಹಿಡಿದು, ರಾತ್ರಿಯೆಲ್ಲಾ ನಿದ್ದೆಯಿಲ್ಲದೇ ಕಂಗೆಟ್ಟು ಕುಳಿತ ನಿವಾಸಿಗಳಿಗೆ ಸುದ್ದಿ ಮುಟ್ಟಿಸಿದರು. ರತ್ನಳ ಹೊರತಾಗಿ ಉಳಿದವರೆಲ್ಲಾ ವೀರಭದ್ರನನ್ನು ಬಲಿ ಪಡೆದ ಚಿರತೆಯನ್ನು ನೋಡಲು ಧಾವಿಸಿ ಬಂದರು. ಒಂದೇ ಪ್ರಯತ್ನಕ್ಕೆ ಸೆರೆ ಸಿಕ್ಕ ವ್ಯಾಘ್ರದ ಹಾರಾಟವನ್ನು ಬೆನ್ನ ಹುರಿಯಲ್ಲಿ ನಡುಕ ಹುಟ್ಟಿಸಿಕೊಂಡು ನೋಡುತ್ತ ನಿಂತರು. ಕತ್ತಲಾಗ ತೊಡಗಿದರೂ ಅರವಳಿಕೆಯ ತಜ್ಞರನ್ನು ಕರೆ ತರಲು ಹೋದವರ ಸುಳಿವಿರಲಿಲ್ಲ. ಹೊತ್ತು ಮೀರುವುದರ ಜೊತೆಗೇ, ಎಲ್ಲರ ತಾಳ್ಮೆ ಪರೀಕ್ಷಿಸುವಂತಿತ್ತು. ಚಿರತೆ ಎಗರಾಡಿ ಕಡೆಗೆ ಸೋತು ಶರಣಾಗತವಾದಂತೆ ಮುದುಡಿ ಕುಳಿತಿತ್ತು.

ಕಡೆಗೂ ಗ್ಯಾಸ್ ಲೈಟ್ ಹತ್ತಿಸಿ ಅರಣ್ಯ ಇಲಾಖೆಯ ಸಿಬ್ಬಂದಿ ಬಂದರು. ಇಲಾಖೆಯಿಂದ ಮತ್ತು ಸರಕಾರದಿಂದ ಅನುಮತಿ ಪಡೆದು, ಮುಂದಿನ ಕಾರ್ಯಗಳು ನಿರ್ವಹಿಸಬೇಕಾಗಿದ್ದು, ಅದರ ತಯಾರಿಕೆಗೆ ಇಷ್ಟು ವಿಳಂಬವಾಯಿತೆಂದು ಅವರು ತಡವಾದ ಬಗ್ಗೆ ಕಾರಣ ತಿಳಿಸಿದರು. ಅವರಲ್ಲಿ ಒಬ್ಬಾತ ತಜ್ಞ ಎಂದು ನೋಡುವಾಗಲೇ ತಿಳಿಯುತ್ತಿತ್ತು. ಆತ ಮೆಲ್ಲನೆ ಚಿರತೆಯನ್ನು ಬಲೆಯ ಸಮೇತ ಕೆಳಗಿಳಿಸಿ ಅರವಳಿಕೆಯನ್ನು ಆ ವ್ಯಾಘ್ರದತ್ತ ತೂರಿದ. ಅದು ನೇರವಾಗಿ ಹೋಗಿ ಆ ಚಿರತೆಗೆ ಚುಚ್ಚಿ ಕುಳಿತಿತು. ಅದರ ದ್ರವ ಆ ಪ್ರಾಣಿಯ ದೇಹದ ಒಳ ಹೊಕ್ಕಂತೇ ನಿಧಾನವಾಗಿ ಪ್ರಜ್ಞೆ ಕಳೆದುಕೊಳ್ಳತೊಡಗಿತು. ಇನ್ನು ಹೊತ್ತು ವ್ಯಯ ಮಾಡುವಂತಿರಲಿಲ್ಲ.

ಚಿರತೆಯನ್ನು ಕುಟ್ಟಿ ಅಲುಗಾಡಿಸಿದರೂ ಮಿಸುಕಾಡದಾಗ ಅದು ಪ್ರಜ್ಞಾಶೂನ್ಯ ವಾಗಿರುವುದು ಖಾತ್ರಿ ಮಾಡಿಕೊಂಡರು. ಮೊದಲೇ ಸಿದ್ದಪಡಿಸಿಕೊಂಡಿದ್ದ ಗಟ್ಟಿ ಉದ್ದ ಮತ್ತು ದಪ್ಪವಾದ ಬಡಿಗೆಗೆ ಚಿರತೆಯನ್ನು ಬಲೆ ಸಹಿತ ಕಟ್ಟಿಕೊಂಡು ಸೇತುವೆಯ ಕಡೆಗೆ ಹೊತ್ತೊಯ್ದರು. ವಾಹನ ಕೆಳಗೆ ಬಾರದಿರುವ ಕಾರಣ, ಸಂಚಾರದ ವ್ಯವಸ್ಥೆ ಸೇತುವೆಯ ಮೇಲಿನ ರಸ್ತೆಯ ತನಕ ಮಾತ್ರ ಸೀಮಿತವಾಗಿತ್ತು. ಅಲ್ಲಿ ಆಗಲೇ ದೊಡ್ಡ ಲಾರಿಯೊಂದು ಕಬ್ಬಿಣದ ಬೋನು ಸಹಿತ ಕಾದು